**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.**

**ಸಿ.ಸಿ ನಂ: 329/2015**

ಪಿ.ಡಬ್ಲ್ಯೂ **- 2**
ಸಿ.ಡಬ್ಲ್ಯೂ **- 6**

ಹೆಸರು : ಅಪ್ಪಯ್ಯಾ ನಾರಾಯಣ ಗುರವ

ವಯಸ್ಸು : **40** ವರ್ಷ

ಉದ್ಯೋಗ : ಟೈಲ್ಸ ಫಿಟಿಂಗ್

ವಾಸ : ಗುರವ ಗಲ್ಲಿ, ತಾಃ ಖಾನಾಪೂರ

ದಿನಾಂಕ 09-12-2024 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಸಸಅ ರವರಿಂದ</u>**

ಚಾಸಾ 1 ನನ್ನ ತಮ್ಮ. ಚಾಸಾ 2 ಮತ್ತು 3 ರವರ ಪರಿಚಯ ಇರುತ್ತದೆ. ಚಾಸಾ 4 ನನ್ನ ತಂದೆ. ಚಾಸಾ 5 ನನ್ನ ಚಿಕ್ಕಪ್ಪ. ಚಾಸಾ 7 ನನ್ನ ದೊಡ್ಡ ಸಹೋದರ. ಚಾಸಾ 8 ಮತ್ತು 9 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ.

ಹಲಕರ್ಣಿ ಹದ್ದಿಯ ಸರ್ವೆ ನಂ.69 ಕ್ಷೇತ್ರ 4 ಎಕರೆ 30 ಗುಂಟೆ ಕಬ್ಬು ಬೆಳೆಸಿದ ಜಮೀನು ಇರುತ್ತದೆ. ಸದರಿ ಜಮೀನು ನಮ್ಮದಾಗಿರುತ್ತದೆ. ದಿನಾಂಕ 14.02.2014 ರಂದು ಆರೋಪಿತರೆಲ್ಲರೂ ಕಬ್ಬು ಕಟಾವ ಮಾಡಲು ನಮ್ಮ ಹೊಲಕ್ಕೆ ಬಂದಿದ್ದರು. ನಾನು, ಚಾಸಾ 1, 4, 5 ಮತ್ತು 7 ಎಲ್ಲರೂ ಸೇರಿಕೊಂಡು ಆರೋಪಿತರಿಗೆ ಕಬ್ಬನ್ನು ಏಕೆ ಕಡಿಯುತ್ತೀರೆಂದು ವಿಚಾರಿಸಿದೇವು. ಆಗ ಆರೋಪಿತರು ಅದನ್ನು ಕೇಳಲು ನೀವು ಯಾರು ಎಂದು ನಮಗೆ ಕೇಳಿದರು. ಆಗ ನಾವು ಆರೋಪಿತರಿಗೆ ಸದರಿ ಜಮೀನಿನ ಮೇಲೆ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ, ನ್ಯಾಯಾಲಯದ ಆದೇಶದಂತೆ ನಡೆದಕೊಳ್ಳೋಣ ಎಂದು ಹೇಳಿರುತ್ತೇವೆ. ಆರೋಪಿತರು ನಮಗೆ ನಮ್ಮನ್ನು ಕೇಳಲು ನೀವು

ಯಾರು ಬೋಸಡಿಕೆ ಎಂದು ನಮ್ಮನ್ನು ಬೈದರು. ಆರೋಪಿ 1, 2 ಮತ್ತು 4 ಇವರು ನನಗೆ ಕಟ್ಟಿಗೆಯಿಂದ ಬಲ ಕೈಯ ಕಿರು ಬೆರಳಿಗೆ ಮತ್ತು ಎಡಗಾಲಿನ ಮಂಡಿ ಮೇಲೆ ಹೊಡೆದರು. ಚಾಸಾ 5 ರವರಿಗೆ ಆರೋಪಿ ನಂ.1, 2 ಮತ್ತು 4 ರವರು ಕಟ್ಟಿಗೆಯಿಂದ ಎದೆಗೆ ಮತ್ತು ಕಾಲಿಗೆ ಹೊಡೆದರು. ನಂತರ ಚಾಸಾ 4 ರವರಿಗೆ ಎದೆಗೆ, ಕಾಲಿಗೆ ಆರೋಪಿ ನಂ.2, 4 ರವರು ಕಟ್ಟಿಗೆಯಿಂದ ಹೊಡೆದರು. ಚಾಸಾ 7 ರವರಿಗೆ ಆರೋಪಿ ನಂ.2, 4 ಮತ್ತು 5 ರವರು ಕಲ್ಲಿನಿಂದ ಬಾಯಿಗೆ, ಎದೆಗೆ ಮತ್ತು ಎಡಗಾಲಿಗೆ ಹೊಡೆದರು. ಚಾಸಾ 8 ಮತ್ತು 9 ರವರು ತಂಟೆಯನ್ನು ಬಿಡಿಸಿರುತ್ತಾರೆ. ಸದರಿ ಘಟನೆಯು ಮುಂಜಾನೆ 09.30 ಗಂಟೆಗೆ ನಡೆದಿರುತ್ತದೆ. ನಂತರ ನಾವು ಪೊಲೀಸ ಠಾಣೆಗೆ ಹೋಗಿರುತ್ತೇವೆ. ನಂತರ ಚಿಕಿತ್ಸೆಗೆಂದು ಆಸ್ಪತ್ರೆಗೆ ಹೋದೆವು. ಚಾಸಾ 1 ರವರು ಈ ಕುರಿತು ಪಿರ್ಯಾದಿಯನ್ನು ನೀಡಿರುತ್ತಾರೆ . ಮಾರನೆ ದಿನ ಪೊಲೀಸರು ಆಸ್ಪತ್ರೆಗೆ ಬಂದು ಪಂಚನಾಮೆ ಮಾಡಿದರು. ನ್ಯಾಯಾಲಯದಲಿ ಆರೋಪಿ ನಂ. 2 ಮತ್ತು 5 ರವರು ಹಾಜರು ಇರುತ್ತಾರೆ. (ಆರೋಪಿ ನಂ.1, 3 ಹಾಗೂ 4 ಗೈರುಹಾಜರಿದ್ದು, ಆರೋಪಿತರ ಪರ ವಕೀಲರು ಇಪಿ ಹಾಕಿರುವುದರಿಂದ ಸದರಿ ಆರೋಪಿತರ ಗುರುತಿಸುವಿಕೆಯನ್ನು ವಿವಾದಗೊಳಿಸಿರುವುದಿಲ್ಲ) ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆ , ಗಾಜಿನ ಚುರು ಹಾಗೂ ಕಲ್ಲುಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ವಸ್ತುಗಳನ್ನು ಈಗಾಗಲೇ ಮು ಮಾ 1 ರಿಂದ 5 ಎಂದು ಗುರುತಿಸಲಾಗಿರುತ್ತದೆ. ಆರೋಪಿತರು ನನಗೆ ಗಾಜಿನ ಬಾಟಲಿಯಿಂದ ಕೂಡ ಹೊಡೆದಿರುತ್ತಾರೆ.

***(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)***

**ಪಾಟೀ ಸವಾಲುಃ ಸಸಅ ರವರಿಂದ**

ಚಾಸಾ 1 ರವರಿಗೆ ಆರೋಪಿ 2 ಈತನು ತನ್ನ ಕೈಯಲ್ಲಿದ್ದ ಬಾಟಲಿ ಹಾಗೂ ಕಲ್ಲಿನಿಂದ ಹೊಡೆದಿರುತ್ತಾನೆ ಎಂದರೆ ಸರಿ. ಈ ಸಲ ನೀವು ಉಳಿದುಕೊಂಡಿದ್ದೀರಿ ಮುಂದಿನ ಸಲ ನಿಮ್ಮನ್ನು ಬಿಡುವುದಿಲ್ಲ ಎಂದು ಆರೋಪಿತರು ತಮ್ಮ ಕೈಯಲ್ಲಿದ್ದ ಕಟ್ಟಿಗೆ ,ಕಲ್ಲು ಮತ್ತು ಬಾಟಲಿಯನ್ನು ಅಲ್ಲೇ ಒಗೆದು ಹೋಗಿರುತ್ತಾರೆ ಎಂದರೆ ಸರಿ .

**ಪಾಟೀ ಸವಾಲುಃ ಆರೋಪಿತರ ಪರ ಜಿ ಎಂ ಡಿ ವಕೀಲರಿಂದ**

ಸರ್ವೆ ನಂ. 69 ರ ಹೊಲದ ಮೇಲಿರುವ ದಾವೆಯು 2012 ನೇ ಸಾಲಿನಲ್ಲಿ ಆರಂಭವಾಗಿದೆ, ನಾನು ಸದರಿ ಹೊಲದ ಪಹಣಿ ಪತ್ರಿಕೆಯನ್ನು 2012 ರ ಮೊದಲು ನೋಡಿದ್ದೆ , ನಂತರ ನೋಡಿಲ್ಲ. ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ಪೊಲೀಸರಿಗೆ ಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರಿ ಹೊಲ 4 ಎಕರೆ 30 ಗುಂಟೆ ಇರುವ ಬಗ್ಗೆ ಉತಾರವನ್ನು ಸರ್ಕಾರಿ ವಕೀಲರ ಮೂಲಕ ಈ ನ್ಯಾಯಾಲಯಕ್ಕೆ ಹಾಜರು ಮಾಡಲು ಯಾವುದೇ ತೊಂದರೆ ಇಲ್ಲ. ನಾನು ಪಹಣಿ ಪತ್ರಿಕೆಯನ್ನು ನೋಡಿದಾಗ ಅದರಲ್ಲಿ ಸದರಿ ಹೊಲದ ಮಾಲಿಕರ ಹೆಸರು ಗಣಪತಿ ಕಲ್ಲಪ್ಪಾ ಗುರವ ಎಂದು ಇತ್ತು. ಸದರಿ ಸರ್ವೆ ನಂ.69 ರಲ್ಲಿ ಈಗ 3 ಪೋಟ ಹಿಸ್ಸೆಗಳು ಇರುತ್ತವೆ. ಸದರಿ ಪೋಟಿ ಹಿಸ್ಸೆ ಆಗಿರುವುದು ನಮಗೆ 2012 ರಲ್ಲಿ ಗೊತ್ತಾಗಿದ್ದು ಆ ನಂತರ ನಾವು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದೇವು. ಸರ್ವೆ ನಂ.69/1 ರಿಂದ 69/3 ಇದಕ್ಕೆ ಯಾರು ಮಾಲಿಕರೆಂದು ಉತಾರದಲ್ಲಿ ತೋರಿಸಲಾಗಿದೆ ಎಂದು ನಾನು ನೋಡಿಲ್ಲ. ನನಗೆ ಸಿವಿಲ್ ಪ್ರಕರಣದ ಬಗ್ಗೆ ಪೂರ್ಣ ಮಾಹಿತಿ ಇಲ್ಲ ಆದರೆ ಅಲ್ಪ ಮಾಹಿತಿ ಇದೆ. ರಿಸ ನಂ. 69/1 ಇದರ ಉತಾರದಲ್ಲಿ ಇವತ್ತಿಗೂ 1ನೇ ಆರೋಪಿತನ ಹೆಸರು ಮಾಲಿಕ ಹಾಗೂ ಕಬ್ಜಾದಾರ ಎಂದು ನಮೂದು

ಇದೆ ಎಂದರೆ ಸಾಕ್ಷಿಯು ಅದನ್ನು ಸೃಷ್ಟಿಸಿಕೊಂಡಿದ್ದಾರೆಂದು ಹೇಳುತ್ತಾರೆ. ಸದರಿ ಖೊಟ್ಟಿ ದಾಖಲಾತಿಯನ್ನು ನಾವು ಯಾವುದೇ ಪ್ರಕರಣದಲ್ಲಿ ಪ್ರಶ್ನಿಸಿರುವುದಿಲ್ಲ ಆದರೆ ಈಗಾಗಲೇ ಸಿವಿಲ್ ಪ್ರಕರಣ ಚಾಲ್ತಿಯಲ್ಲಿರುತ್ತದೆ. ಅದರಲ್ಲಿ ನ್ಯಾಯ ಕೊಡಬಹುದು. ಇಲ್ಲಿಯವರೆಗೂ ಸದರಿ ಎಂಟ್ರಿ ರದ್ದಾಗಿರುವುದಿಲ್ಲ. ರಿಸ ನಂ. 69 ರಲ್ಲಿ 1ನೇ ಆರೋಪಿಯು ಫಾರ್ಮ ಹೌಸ ಕಟ್ಟಿರುತ್ತಾನೆ, ಪಂಪ್ ಸೇಟ್ ಕೂಡಿಸಿರುತ್ತಾನೆ ಹಾಗೂ ವಿದ್ಯುತ್ ಕನೆಕ್ಷನನ್ನು 1ನೇ ಆರೋಪಿತನ ಹೆಸರಿನಲ್ಲಿ ಪಡೆದುಕೊಂಡಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಸದರಿ ಹೊಲದಲ್ಲಿನ ಕಬ್ಬುಗಳನ್ನು 1ನೇ ಆರೋಪಿತನು ಈಗಿನ ಲೈಲಾ ಸಕ್ಕರೆ ಕಾರ್ಖಾನೆ ಹಿಂದಿನ ಭಾಗ್ಯಲಕ್ಷ್ಮೀ ಕಾರ್ಖಾನೆಗೆ ಹಾಗೂ ಸಂಕೇಶ್ವರದ ಸಕ್ಕರೆ ಕಾರ್ಖಾನೆಗೆ ಮಾರುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ನಾವು ರಿಸ 69/1 ರಲ್ಲಿ ಕಬ್ಬು ಬೆಳೆಸುವ ಪ್ರಶ್ನೇ ಉದ್ಭವಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಮ್ಮ ಪಿರ್ಯಾದಿಯನ್ನು ನೀಡುವಾಗ ನಾನು ಆತನ ಜೊತೆ ಇರಲಿಲ್ಲ ಆದರೆ ನನಗೆ ಜಗಳದಲ್ಲಿ ಹೊಡೆದಿದ್ದರಿಂದ ಗಾಯಗಳಾಗಿ ನಾನು ಆಸ್ಪತ್ರೆಗೆ ಹೋಗಿದ್ದೆ. ಸದರಿ ಜಗಳವಾಗಿರುವುದು ರಿಸ ನಂ.69 ರಲ್ಲಿ. ಯಾವ ಹಿಸ್ಸಾದಲ್ಲಿದಾಗಿದೆ ಎಂದರೆ ಸಾಕ್ಷಿಯು ರಿಸ ನಂ.69 ರಲ್ಲಿ ಆಗಿದೆ ಎಂದು ನುಡಿಯುತ್ತಾರೆ. ರಿಸ ನಂ. 69 ರ ಉತಾರದಲ್ಲಿ ನನ್ನ ತಂದೆ ಹಾಗೂ ನಮ್ಮ ಅಣ್ಣತಮ್ಮಂದಿರ ಹೆಸರು ಯಾವತ್ತು ದಾಖಲು ಇರಲಿಲ್ಲ.ಆದರೆ ನನ್ನ ಅಜ್ಜನ ಹೆಸರು ನಮೂದು ಇತ್ತು. ಈಗ ಚಾಲ್ತಿಯಲ್ಲಿರುವ ಸಿವಿಲ್ ಪ್ರಕರಣವನ್ನು ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ದಾಖಲಿಸಿರುತ್ತಾರೆ. ಸದರಿ ದಾವೆಯಲ್ಲಿ ಆರೋಪಿತರ ವಿರುದ್ಧ ಯಾವುದೇ ಪ್ರತಿಬಂಧಕಾಜ್ಞೆ ಇರುವುದಿಲ್ಲ ಎಂದರೆ ಸಾಕ್ಷಿಯು ಮುಂದೆ ನ್ಯಾಯಾಲಯ ಕೊಡಬಹುದು ಎಂದು ನುಡಿಯುತ್ತಾರೆ. ರಿಸ ನಂ. 69 ರಲ್ಲಿ ಹಾಗೂ ಅದರ ಪೋಟ ಹಿಸ್ಸಾಗಳಲ್ಲಿ ನನ್ನ ಅಜ್ಜ, ಅಪ್ಪ ಹಾಗೂ ನನ್ನ ಚಿಕ್ಕಪ್ಪ, ಅಣ್ಣತಮ್ಮಂದಿರ ಹಕ್ಕು ಇರುವುದಿಲ್ಲ

ಎಂದರೆ ಸರಿಯಲ್ಲ. ಸದರಿ ವಿಷಯದ ಬಗ್ಗೆ ನಾನು ಕೇವಲ ಬಾಯಿ ಮಾತಿನಲ್ಲಿ ಹೇಳುತ್ತಿದ್ದೆನೆ ಹೊರತು ಯಾವುದೇ ಲೆಖಿ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿತರು ಇನ್ನೊಂದು ಪ್ರಕರಣ ದಾಖಲಿಸಿದ್ದಾರೆ ಅದರಲ್ಲಿ ನಾನು, ನನ್ನ ತಂದೆ, ನನ್ನ ಚಿಕ್ಕಪ್ಪ ಆರೋಪಿತರು ಇದ್ದೇವೆ ಎಂದರೆ ಸರಿ . ಆರೋಪಿ ನಂ. 2 ನಮ್ಮ ಮೇಲೆ ಅವರು ಅವರ ಹೊಲದಲ್ಲಿ ಕಬ್ಬನ್ನು ಕಡೆಯುತ್ತಿರುವಾಗ ಆತನಿಗೆ ಹಾಗೂ ಆತನ ಅಣ್ಣತಮ್ಮಂದಿರಿಗೆ ಕಟ್ಟಿಗೆ, ಕಲ್ಲು ಹಾಗೂ ಗಾಜಿನ ಬಾಟಲಿಯಿಂದ ಹೊಡೆದರೆಂದು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ . ಆರೋಪಿತರ ಹೊಲಕ್ಕೆ ಹೋಗಿ ಅವರಿಗೆ ಹೊಡೆಯುವ ಹಕ್ಕು ನಮಗೆ ಇಲ್ಲ ಎಂದರೆ, ಸಾಕ್ಷಿಯು ಆ ಜಮೀನು ನಮ್ಮದು ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಜಮೀನಾದರೆ ಹೊಡೆಯುತ್ತೀರಾ ಎಂದರೆ ಸಾಕ್ಷಿಯು ನಾವು ಹೊಡೆದಿಲ್ಲ ಅವರೇ ಹೊಡೆದಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿತರಿಗೆ ನಾವು ಹೊಡೆದಿದ್ದೇವೆ ಎಂಬುದರ ಬಗ್ಗೆ ವೈದ್ಯರು ಪ್ರಮಾಣ ಪತ್ರ ನೀಡಿರುತ್ತಾರೆ ಹಾಗೂ ಆರೋಪಿತರಿಗೆ ಹೊಡೆದಿರುವ ಬಗ್ಗೆ ತನಿಖಾಧಿಕಾರಿಯು ಕಟ್ಟಿಗೆ , ಕಲ್ಲು ಹಾಗೂ ಗಾಜಿನ ಬಾಟಲನ್ನು ಜಪ್ತು ಪಡಿಸಿಕೊಂಡು ವರದಿ ಹಾಕಿರುತ್ತಾರೆಂದರೆ ಸಾಕ್ಷಿಯು ನಮ್ಮ ಕಡೆಯು ದಾಖಲೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಘಟನೆಯು ಬೆಳಿಗ್ಗೆ 09.30 ಗಂಟೆಗೆ ನಡೆದಿರುತ್ತದೆ. ನಾವು 10.30 ಗಂಟೆಗೆ ಪೊಲೀಸ ಠಾಣೆಗೆ ಬಂದೇವು ಅಲ್ಲಿಂದ ನಮ್ಮನ್ನು ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಘಟನೆಯು ಒಂದು ಗಂಟೆ ಅವಧಿಗೆ ಜರುಗಿರುತ್ತದೆ. ಜಗಳವಾದ ಹೊಲದಿಂದ ಪೊಲೀಸ ಠಾಣೆಗೆ ನಾವು ಸ್ವಲ್ಪ ಜನ ನಡೆದುಕೊಂಡು ಹಾಗೂ ಸ್ವಲ್ಪ ಜನ ಗಾಡಿಯ ಮೇಲೆ ಹೊದೆವು. ಚಾಸಾ 1 ಹೇಗೆ ಬಂದನೆಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಮೊದಲು ಆಸ್ಪತ್ರೆಗೆ ಹೋಗಿದ್ದೆ ಅಲ್ಲಿಂದ ಆಸ್ಪತ್ರೆಯ ಸಿಬ್ಬಂದಿಗಳ ಸಲಹೆಯ ಮೇರೆಗೆ ಪೊಲೀಸ ಠಾಣೆಗೆ ಬಂದೆ. ಮತ್ತೆ ಪೊಲೀಸ ಠಾಣೆಯಿಂದ ಪೊಲೀಸರ ಸಲಹೆಯಂತೆ ಆಸ್ಪತ್ರೆಗೆ ಹೊದೆ. ನಾನು ಹೊಲದಿಂದ ಆಸ್ಪತ್ರೆಗೆ ಅಲ್ಲಿಂದ ಪೊಲೀಸ ಠಾಣೆಗೆ ಹಾಗೂ

ಅಲ್ಲಿಂದ ಆಸ್ಪತ್ರೆಗೆ ಬರಲು ಒಟ್ಟು ಒಂದು ಗಂಟೆ ಸಮಯ ಹಿಡಿದಿರುತ್ತದೆ. ಜಗಳವಾದ ಹೊಲದಲ್ಲಿನ ಸುತ್ತಮುತ್ತಲು ಯಾರ ಹೊಲ ಇವೆ ಎಂದು ನನಗೆ ಗೊತ್ತಿಲ್ಲ. ರಿಸ ನಂ. 69 ಹೊಲ ಡುಕ್ಕರವಾಡಿ ರಸ್ತೆಗೆ ಹೊಂದಿಕೊಂಡು ಇರುತ್ತದೆ. ಸದರಿ ರಸ್ತೆಯಿಂದ ಡುಕ್ಕರವಾಢಿ ಮುಡೆವಾಡಿ ಹಾಗುರಾ ಹತ್ತರಗುಂಜಿ ಗ್ರಾಮಸ್ಥರು ಖಾನಾಪೂರಕ್ಕೆ ಹೊಗಿ ಬರುವುದು ಮಾಡುತ್ತಿರುವುದರಿಂದ ಸದರಿ ರಸ್ತೆ ಬೆಳಗಿನ ಜಾವ ಜನನಿಬಿಡವಾಗಿರುತ್ತದೆ ಎಂದು ಸೂಚಿಸಿದರೆ ಕೆಲವೊಮ್ಮೆ ಆಗಿರುತ್ತದೆ ಕೆಲವೊಮ್ಮೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಗಾಯಗಳಾಗಿದ್ದರಿಂದ ಸದರಿ ಜಗಳದಲ್ಲಿ ಬಾಯಿ ಮಾಡುವುದನ್ನು ಕೇಳಿ ಎಷ್ಟು ಜನ ಸೇರಿದ್ದರು ಎಂದು ನೋಡಲು ಸಾಧ್ಯವಾಗಲಿಲ್ಲ. ಅಲ್ಲಿ ಎಷ್ಟು ಜನ ಸೇರಿದ್ದರೆಂದು ನನ್ನ ಅಣ್ಣತಮ್ಮಂ ದಿರಿಗೂ ಕೂಡ ಗೊತ್ತಿಲ್ಲ. ಚಾಸಾ 8 ನಮ್ಮ ದಾಯಾದಿ , ಚಾಸಾ 9 ನಮಗೆ ಸಂಬಂಧಿಕನಲ್ಲ. ಖಾನಾಪೂರ ಸರ್ಕಾರಿಯ ವಾಹನದಲ್ಲಿ ನಮ್ಮನ್ನು ಬೆಳಗಾವಿಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಾನು ಎರಡು ದಿನ ಹಾಗೂ ಚಾಸಾ 7 ನಾಲ್ಕು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ಆ ಸಮಯದಲ್ಲಿ ಹೊಲದಲ್ಲಾಗಲೀ ಹಾಗೂ ಪೊಲೀಸ ಠಾಣೆಯಲ್ಲಾಗಲೀ ಏನಾಯಿತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಮುದ್ದೆ ಮಾಲಿನಲ್ಲಿರುವ ತೋರಿಸುವ ಕಟ್ಟಿಗೆಯಂತೆ ಅನೇಕ ಕಟ್ಟಿಗೆಗಳು ಸಿಗುತ್ತವೆ ಎಂದರೆ ಸರಿಯಲ್ಲ. ಚಾಸಾ 1 ರವರು ನನಗೆ ಪೊಲೀಸರು ಮುದ್ದೆ ಮಾಲಿನಲ್ಲಿರುವ ಕಟ್ಟಿಗಳನ್ನು ಪಂಚನಾಮೆ ಕಾಲಕ್ಕೆ ತಂದಿದ್ದರು ಎಂದು ನನಗೆ ಹೇಳಿದ್ದನು. ಅದೇ ರೀತಿ ಚಾಸಾ 1 ರವರು ಜಾಗವನ್ನು ತೋರಿಸಲು ಹೋದಾಗ ಕಲ್ಲು ಹಾಗೂ ಗಾಜಿನ ಚುರನ್ನು ಪೊಲೀಸರು ತಂದಿದ್ದರು.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ನಮಗೆ ಹೊಡೆ ಬಡಿ ಮಾಡಿಲ್ಲ, ನಾವು ಆಸ್ಪತ್ರೆಗೆ ದಾಖಲಾಗಿಲ್ಲ ಹಾಗೂ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಖೊಟ್ಟಿ

ಫಿರ್ಯಾದಿಯನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಖೊಟ್ಟಿ ದೂರನ್ನು ನೀಡಿದ್ದಾರೆಂದರೆ ಸರಿಯಲ್ಲ. ಸಿವಿಲ್ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಫಿರ್ಯಾದಿಯನ್ನು ದಾಖಲಿಸಿ ಪೊಲೀಸರೊಂದಿರೆ ಮಿಲಾಪಿಯಾಗಿ ಸುಳ್ಳು ವರದಿಯನ್ನು ಹಾಕಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.